# ಕರ್ನಾಟಕ ಸರ್ಕಾರ
## (ಕೃಷಿ ಇಲಾಖೆ)

ಸಂ:ಜಕೃನಿ(CSS)/NFSM/S.A.Plan/ಜಿಲ್ಲಾ ಕಾರ್ಯಕ್ರಮ/2019-20

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು
ದಿನಾಂಕ:23.10.2019

ಇವರಿಗೆ,

ಜಂಟಿ ಕೃಷಿ ನಿರ್ದೇಶಕರು
ಬಾಗಲಕೋಟೆ/ಬೆಳಗಾವಿ/ಬಳ್ಳಾರಿ/ಬೀದರ್/ಚಿಕ್ಕಮಗಳೂರು
ಚಿತ್ರದುರ್ಗ/ದಾವಣಗೆರೆ/ಧಾರವಾಡ/ಗದಗ/ಕಲಬುರಗಿ/ಹಾಸನ/ಕೊಪ್ಪಳ
ಹಾವೇರಿ/ಮೈಸೂರು/ರಾಯಚೂರು/ವಿಜಯಪುರ/ಯಾದಗಿರಿ.

ವಿಷಯ : 2019-20 ನೇ ಸಾಲಿನ ಎನ್.ಎಫ್.ಎಸ್.ಎಮ್ ಯೋಜನೆ ಅಡಿ ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ "ವಿಶೇಷ ದ್ವಿದಳ ಧಾನ್ಯಗಳ ಉತ್ಪಾದನಾ ಕಾರ್ಯಕ್ರಮ"ವನ್ನು ಅನುಷ್ಠಾನಗೊಳಿಸುವ ಬಗ್ಗೆ

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರ ಸಂ:3-9/2019-NFSM- Dt. 18-10-2019

**********

ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನದ ದ್ವಿದಳ ಧಾನ್ಯ ಯೋಜನೆಯಡಿ 2019-20ನೇ ಸಾಲಿನಲ್ಲಿ ರಾಜ್ಯದಲ್ಲಿ ಕಡಿಮೆ ಉತ್ಪಾದಕತೆ ಹೊಂದಿರುವ ಜಿಲ್ಲೆಗಳಲ್ಲಿ ದ್ವಿದಳಧಾನ್ಯಗಳ ಉತ್ಪಾದಕತೆ ಮತ್ತು ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟನಲ್ಲಿ ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ ಕೈಗೊಳ್ಳಲು ಒಟ್ಟು ರೂ. 3433.69 ಲಕ್ಷಗಳ ವೆಚ್ಚದ ಕಾರ್ಯಕ್ರಮಕ್ಕೆ (**ಲೆಕ್ಕ ಶೀರ್ಷಿಕೆ 2401-00-102-0-08**) ಕೇಂದ್ರ ಸರ್ಕಾರದ ಉಲ್ಲೇಖಿತ ಪತ್ರದಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆ ದೊರೆತಿರುತ್ತದೆ.

ರಾಜ್ಯದ ಆಯ್ದ 17 ಜಿಲ್ಲೆಗಳಿಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅನುಬಂಧದಲ್ಲಿ ವಿವರಗಳನ್ನು ನೀಡಲಾಗಿದೆ.

**ಕಾರ್ಯಕ್ರಮ ಅನುಷ್ಠಾನಕ್ಕೆ ಈ ಕೆಳಗಿನಂತೆ ಕ್ರಮವಹಿಸುವುದು.**

- ಕಾರ್ಯಕ್ರಮದ ಘಟಕಗಳಡಿ ವರ್ಗವಾರು (ಸಾಮಾನ್ಯ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ) ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಮಹಿಳೆಯರಿಗೆ ಆದ್ಯತೆ ನೀಡಿ ಶೇ.33% ರಷ್ಟು ಅನುದಾನವನ್ನು ಮಹಿಳಾ ಫಲಾನುಭವಿಗಳಿಗೆ ಮೀಸಲಿರಿಸುವುದು.

- **ಕಡಲೆ/ಅಲಸಂದೆ ಯಾಂತ್ರೀಕೃತ ಬಿತ್ತನೆ/ಕೂರಿಗೆ ಬಿತ್ತನೆ ಗುಚ್ಛ ಪ್ರಾತ್ಯಕ್ಷಿಕೆಗಳಡಿ ಚಟುವಟಿಕೆಗಳು ಮತ್ತು ವೆಚ್ಚ**

| ಕ್ರ ಸಂ. | ಪ್ರೇರಕಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಬಿತ್ತನೆ ಬೀಜ-ಕಡಲೆ-50 ಕಿ.ಗ್ರಾಂ/ ಅಲಸಂದೆ-15 ಕಿ.ಗ್ರಾಂ | 1500.00 |
| 2 | ಬೀಜೋಪಚಾರ(ಪಿ.ಎಸ್.ಬಿ., ರೈಜೋಬಿಯಂ, ಟ್ರೈಕೋಡರ್ಮಾ ಇತ್ಯಾದಿ) | 500.00 |
| 3 | ಲಘು ಪೋಷಕಾಂಶಗಳು, ಎಲೆ ಮೇಲೆ ಪೋಷಕಾಂಶಗಳ ಸಿಂಪರಣೆ ಮತ್ತು ಸಾವಯವ ಗೊಬ್ಬರ | 2200.00 |
| 4 | ಸಮಗ್ರ ಪೀಡೆ ನಿರ್ವಹಣೆ-ಸಸ್ಯ ಸಂರಕ್ಷಣೆ ಮತ್ತು ಕಳೆನಾಶಕ | 2500.00 |

| | | |
|---|---|---|
| 5 | ಭೂಮಿ ಉಳುಮೆ, ನಾಟಿ ಇತ್ಯಾದಿಗಳಿಗೆ ಬಾಡಿಗೆ ಸೇವಾ ಶುಲ್ಕಗಳು | 1500.00 |
| 6 | ಕ್ಷೇತ್ರೋತ್ಸವ/ರೈತರ ಗೋಷ್ಠಿ, ಪ್ರಚಾರ, ವಿಜ್ಞಾನಿ/ ತಜ್ಞರುಗಳ ಭೇಟಿ | 800.00 |
| | **ಒಟ್ಟು** | **9000.00** |

- **ಪ್ರಾತ್ಯಕ್ಷಿತೆಗಳ** ವಿವಿಧ ಘಟಕಗಳ ಅನುಷ್ಠಾನ, ಉಸ್ತುವಾರಿ ಮತ್ತು ದಾಖಲೀಕರಣಕ್ಕೆ ಸಂಬಂಧಿಸಿದಂತೆ ಆಯ್ಕೆ ಮಾಡಲಾಗುವ ಫಲಾನುಭವಿಗಳ ದಾಖಲಾತಿ ಮತ್ತು ಉಸ್ತುವಾರಿಯನ್ನು KSRSAC ಸಂಸ್ಥೆಯ Mobile & Web portal ಮೂಲಕ ನಿರ್ವಹಿಸುವುದು.

- ಸಮರ್ಥ ನೀರಾವರಿ ಸಾಧನಗಳಡಿ ಸ್ಪ್ರಿಂಕ್ಲರ್ ಸೆಟ್ ವಿತರಣೆ ಕಾರ್ಯಕ್ರಮಗಳನ್ನು ಮುಖ್ಯ ಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ (ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ (PMKSY) ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸುವುದು.

- ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಕೃಷಿ ಯಂತ್ರೋಪಕರಣಗಳು/ಸಿಂಪರಣಾ ಸಾಧನಗಳನ್ನು ಅನುಷ್ಠಾನಗೊಳಿಸುವುದು

**ವಿಶೇಷ ಸೂಚನೆ:** ಸ್ಪ್ರಿಂಕ್ಲರ್ ಸೆಟ್/ಕೃಷಿ ಯಂತ್ರೋಪಕರಣಗಳು/ಸಿಂಪರಣಾ ಸಾಧನಗಳಿಗೆ ರಾಜ್ಯದ ಅನುಮೋದಿತ ಧರಸೂಚಿಯನ್ವಯ ಹೆಚ್ಚುವರಿ ಮೊತ್ತವನ್ನು ಕೃಷಿ ಯಾಂತ್ರೀಕರಣ ಯೋಜನೆ (ರಾಜ್ಯವಲಯ) ಯೋಜನೆಗಳಡಿ ಒಗ್ಗೂಡಿಸಿ ಭರಿಸುವುದು.

ಮುಂದುವರೆದು, ಸದರಿ ಕಾರ್ಯಕ್ರಮವನ್ನು ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನದ ಅನುಷ್ಠಾನಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳು ಮತ್ತು ಎನ್.ಎಫ್.ಎಸ್.ಎಮ್ (2019-20 ನೇ ಸಾಲಿನ ದ್ವಿದಳ ಧಾನ್ಯ) ಯೋಜನೆಯಡಿ ಪ್ರಾತ್ಯಕ್ಷಿಕೆ ಮತ್ತು ಇತರೆ ಘಟಕಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರಸಕ್ತ ಸಾಲಿನಲ್ಲಿ ಈವರೆಗೆ ನೀಡಲಾಗಿರುವ ಮಾರ್ಗಸೂಚಿಗಳನ್ನು ಅನುಸರಿಸಿ, ತಮ್ಮ ಜಿಲ್ಲೆಗೆ ನಿಗದಿಪಡಿಸಿದ ಕಾರ್ಯಕ್ರಮದಂತೆ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ ಹಾಗೂ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಪ್ರತ್ಯೇಕವಾಗಿ ಮಾಸಿಕ ಪ್ರಗತಿ ವರದಿಯನ್ನು ಕೇಂದ್ರ ಕಚೇರಿಗೆ ಮಾಹೆಯಾನ ತಪ್ಪದೆ ಸಲ್ಲಿಸಲು ತಿಳಿಸಿದೆ.

ಕೃಷಿ ನಿರ್ದೇಶಕರು